# ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಫೋನ ನಂಬರ:–221830/256950
ಫ್ಯಾಕ್ಸ್ ನಂಬರ:–256403
ಇ–ಮೇಲ:– seeonmcrl@gmail.com

ಅಧೀಕ್ಷಕ ಅಭಿಯಂತರರು (ವಿ), ರವರ ಕಛೇರಿ,
ಕಾರ್ಯ ಮತ್ತು ಪಾಲನೆ ವೃತ್ತ,
ಗು.ವಿ.ಸ.ಕಂ.ನಿ, ಕಲಬುರಗಿ.

ಅ.ಅ.(ಕಾ ಮತ್ತು ಪಾ ವೃತ್ತ)/ಗು/ಕಾನಿಅ(ಕ)/ಸ.ಕಾ.ನಿ.ಅ.–2/ಕಿಅ–1/ಎಫ್–123/19-20/ 6470 ದಿನಾಂಕ:14/10/19

## ಗ್ರಾಹಕರ ಸಂವಾದ ಸಭೆಯ ನಡಾವಳಿಗಳು

ಮಾನ್ಯ ಅಧೀಕ್ಷಕ ಅಭಿಯಂತರರು(ವಿ)/ಕಾರ್ಯನಿವಾಹಕ ಅಭಿಯಂತರರು (ವಿ) ಕಾರ್ಯ ಮತ್ತು ಪಾಲನಾ, ವೃತ್ತ ಜೆಸ್ಕಾಂ, ಕಲಬುರಗಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 19.08.2019 ರಂದು 10:00 ಗಂಟೆಗೆ ಹುಣಸಗಿ ಉಪ–ವಿಭಾಗ ಕಛೇರಿಯಲ್ಲಿ "ಗ್ರಾಹಕರ ಸಂವಾದ ಹಾಗೂ ಕುಂದುಕೊರತೆ ಸಭೆಯನ್ನು"ನಡೆಸಲಾಯಿತು. ಸಭೆಯಲ್ಲಿ ಈ ಕೆಳಗಿನಂತೆ ಅಧಿಕಾರಿಗಳು ನೌಕರರು ಮತ್ತು ಗ್ರಾಹಕರು ಹಾಜರಾಗಿದ್ದರು.

### ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

1. ಶ್ರೀ. ರವಿಸಿಂಗ ಠಾಕೂರ, ಪ್ರ. ಕಾನಿಅ, ಕಾ ಮತ್ತು ಪಾ ವೃತ್ತ, ಜೆಸ್ಕಾಂ, ಕಲಬುರಗಿ.
2. ಶ್ರೀ ಪರ್ವತ ರೆಡ್ಡಿ ಶಾಖಾಧಿಕಾರಿ ಕಾ ಮತ್ತು ಪಾಲನಾ ಶಾಖೆ, ಜೆಸ್ಕಾಂ, ಕಲಬುರಗಿ.
3. ಶ್ರೀ ಮಹ್ಮದ್ ರಫೀಕ್, ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ–ವಿಭಾಗ, ಜೆಸ್ಕಾಂ, ಹುಣಸಗಿ.
4. ಶ್ರೀ ಬಸಣಗೌಡ ಪ್ರಭಾರಿ ಸಹಾಯಕ ಅಭಿಯಂತರರು(ತಾಂತ್ರಿಕ)ಕಾ ಮತ್ತು ಪಾ ಶಾಖೆ, ಶಾಖಾಧಿಕಾರಿ, ಚಿತ್ತಾಪೂರ.
5. ಶ್ರೀ ಚಂದ್ರಶೇಖರ್ ಶಾಖಾಧಿಕಾರಿ ಕಾ ಮತ್ತು ಪಾ ಶಾಖೆ, ಜೆಸ್ಕಾಂ ಹುಣಸಗಿ.
6. ಶ್ರೀ ಸದಾಶಿವರೆಡ್ಡಿ ಪ್ರಭಾರಿ ಶಾಖಾಧಿಕಾರಿ ಕಾ ಮತ್ತು ಪಾ ಶಾಖೆ, ಜೆಸ್ಕಾಂ, ಹುಣಸಗಿ.

### ಸಭೆಯಲ್ಲಿ ಹಾಜರಿದ್ದ ಮಾರ್ಗದಾಳುಗಳು

1. ಶ್ರೀ ಸೋಮಶೇಖರ್‌ಗೌಡ ಪವರ್‌ಮ್ಯಾನ್
2. ಶ್ರೀ ಪರಶ್ಮರಾಮ ಪವರ್‌ಮ್ಯಾನ್
3. ಶ್ರೀ ಪ್ರಸಾದ ಪವರ್‌ಮ್ಯಾನ್

### ಸಭೆಯಲ್ಲಿ ಹಾಜರಿದ್ದ ಗ್ರಾಮಸ್ಥರು

1. ಶ್ರೀಮ್ಮತಿ ದೆವಮ್ಮ ಮಲಗಲದಿನ್ನಿ ಗ್ರಾಮ ಪಂಚಾಯತಿ ಅಧ್ಯಕ್ಷರು
2. ಶ್ರೀ ಬಸವರಾಜ ಗುರುಲಿಂಗಯ್ಯ ಸ್ಥಾವರಮಠ ಜಿಲ್ಲಾ ಪಂಚಾಯತಿ ಸದಸ್ಯರು
3. ಶ್ರೀ ವಿಠಲ ತಾಲೂಕ ಪಂಚಾಯತಿ ಸದಸ್ಯರು
4. ಶ್ರೀ ಸಂಗಣ್ಣ ವೈಲಿ ಮಾಜಿ ಗ್ರಾಮ ಪಂಚಾಯತ ಅಧ್ಯಕ್ಷರು

ಸಭೆಯಲ್ಲಿ ಚರ್ಚೆ ಮಾಡಿದ ಸಮಸ್ಯೆಗಳ ವಿವರ ಈ ಕೆಳಗಿನಂತಿವೆ.

1. ನಾರಾಯಣಪೂರ ಗ್ರಾಮದಲ್ಲಿ ಕೃಷ್ಣಾ ನದಿ ಪ್ರವಾಹದಿಂದ ರೈತರ ವಿದ್ಯುತ್ ಪರಿವರ್ತಕಗಳ ಕಂಬಗಳು, ವಿದ್ಯುತ್ ತಂತಿಗಳು ನೀರಿನಲ್ಲಿ ಮುಳುಗಿ ಹಾಳಾಗಿರುತ್ತವೆ, ಅದಕ್ಕೆ ಪರಿಹಾ ಸೂಚಿಸಬೇಕೆಂದು ಮನವಿ ಮಾಡಿಕೊಂಡರು.

Scanned with CamScanner

ಅದಕ್ಕೆ ಕಾರ್ಯನಿವಾಹಕ ಅಭಿಯಂತರರು (ವಿ) ರವರು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸಿ ಸಮಸ್ಯೆಯನ್ನು ಬಗೆಹರಿಸಿಕೊಡುತ್ತೇವೆಂದು ಗ್ರಾಹಕರಿಗೆ ತಿಳಿಸಲಾಯಿತು.

2. ವಜ್ಜಲ್ ಶ್ರೀನಿವಾಸಪೂರ ಲಿಂಕ್ ಲೈನ್ ಎನ್.ಜೆ.ವೈ ಮಾಡುವ ಕುರಿತು ಮನವಿ ಕೋರಿದರು.
ಇದಕ್ಕೆ ಕಾರ್ಯನಿವಾಹಕ ಅಭಿಯಂತರರು(ವಿ) ರವರು ಕಾಮಗಾರಿಯನ್ನು ಪೂರ್ಣಗೊಳಿಸಿ ಆದಷ್ಟು ಬೇಗನೆ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು ಎಂದು ತಿಳಿಸಲಾಯಿತು.

3. ರೈತರ ಪಂಪಸೆಟ್ ಗೆ 10 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ಮನವಿ ಕೋರಿದರು.
ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು(ವಿ)., ರವರು ಉತ್ತರಿಸುತ್ತಾ ಈಗಾಗಲೇ ಪಾಳಿ ಪ್ರಕಾರ ವಿದ್ಯುತ್ ಸಂಪರ್ಕ ನೀಡಲಾಗುತ್ತಿದೆ, ಆದ್ದರಿಂದ ಇದನ್ನು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ಕೈ ಗೊಳ್ಳಲಾಗುವುದು ಎಂದು ತಿಳಿಸಲಾಯಿತು.

4. ಎಮ್.ಎಲ್.ಎ ಶಿಫಾರಸ್ಸಿನ ಮೇರಗೆ ಕೋಡೆಕಲ್‌ನ 110 ಕೆ.ವಿ ಸ್ಟೇಶನ್ ಮಾಡುವ ಬಗ್ಗೆ ಮನವಿ ಕೋರಲಾಯಿತು.
ಇದಕ್ಕೆ ಸಂಬಂಧಪಟ್ಟಂತೆ ಸ್ಥಳ ಪರೀಶೀಲನೇ ಮಾಡಿ ಮೇಲಾಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಗ್ರಾಹಕರಿಗೆ ತಿಳಿಸಲಾಯಿತು.

5. ಗುರಿಕಾರ ದೊಡ್ಡಿಗೆ ಟಿ.ಸಿ ಮತ್ತು ಎಲ್ಲಾ ಸಾಮಗ್ರಿಗಳು ಕೊಡಿಸುವ ಕುರಿತು 2 ಕೀಲೊ ಮೀಟರ್ ಲೈನ್ ಸಂಪರ್ಕ ಕೊಡಿಸುವ ಕುರಿತು.
ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು(ವಿ)., ರವರು ಉತ್ತರಿಸುತ್ತಾ ಸಂಬಂದಪಟ್ಟ ಶಾಖಾಧಿಕಾರಿಗೆ ಸ್ಥಳ ಪರೀಶೀಲನೆ ಮಾಡಿ, ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿಯನ್ನು ಮುಗಿಸಿಕೊಡಬೇಕೆಂದು ಸೂಚಿಸಿದರು.

6. ಹುಣಸಗಿ ತಾಂಡಾ ರಾಘಪ್ಪ ಬಾಯಿ ಟಿ.ಸಿ ಯಿಂದ ಲೈನ್ ಟ್ರಬಲ್ ಆಗಿರುತ್ತದೆ, ಲೋಡ್ ಸಾಕಗುತ್ತಿಲ್ಲ, 63 ಕೆವಿ ಟಿ.ಸಿ ಸೇರ್ಪಡೆ ಮಾಡುವ ಕುರಿತು ಚರ್ಚಿಸಲಾಗಿದೆ.
ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು(ವಿ)., ರವರು ಉತ್ತರಿಸುತ್ತಾ ಸಂಬಂದಪಟ್ಟ ಶಾಖಾಧಿಕಾರಿಗೆ ಸ್ಥಳ ಪರೀಶೀಲನೆ ಮಾಡಿ ಟ್ರಬಲ್ ಸರಿಪಡಿಸಿಕೊಡಬೇಕೆಂದು ಸೂಚಿಸಲಾಯಿತು.

7. ವಜ್ಜಲ್ ಗ್ರಾಮದಲ್ಲಿ ಪ್ರಜಾರಿ ಹೊಣೆ ಹೆಚ್ಚುವರಿ ಟಿ.ಸಿ ಮಾಡಬೇಕು.
ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು(ವಿ)., ರವರು ಉತ್ತರಿಸುತ್ತಾ ಸಂಬಂದಪಟ್ಟ ಶಾಖಾಧಿಕಾರಿಗೆ ರವರಿಗೆ ಸ್ಥಳ ಪರೀಶೀಲನೆ ಮಾಡಿ ಸಮಸ್ಯೆಯನ್ನು ಬಗೆಹರಿಸಿಕೊಡಬೇಕೆಂದು ಸೂಚಿಸಲಾಯಿತು.

8. ಉಪ-ವಿಭಾಗಕ್ಕೆ ಲಾರಿ ವ್ಯವಸ್ಥೆಯನ್ನು ಕಲ್ಪಿಸುವುದು.
ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು(ವಿ)., ರವರು ಸಂಬಂದಪಟ್ಟ ಅಧಿಕಾರಿಗೆ ರವರಿಗೆ ತಿಳಿಸಲಾಯಿತು.

9. ಮುರಿದ ಕಂಬಗಳು ಬದಲಾಯಿಸುವುದು.
ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು(ವಿ)., ರವರು ಸಂಬಂದಪಟ್ಟ ಶಾಖಾಧಿಕಾರಿ ರವರಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಮಸ್ಯಯನ್ನು ಸರಿಪಡಿಸಬೇಕೆಂದು ಸೂಚಿಸಲಾಯಿತು.

Scanned with CamScanner

10. ಜೋತು ಬಿದ್ದಿರುವ ವಿದ್ಯುತ್ ತಂತಿಗಳ ಮದ್ಯ ಕಂಬಗಳನ್ನು ಹಾಕುವುದು.

ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು(ವಿ)., ರವರು ಸಂಬಂದಪಟ್ಟ ಶಾಖಾಧಿಕಾರಿ ರವರಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಮಸ್ಯಯನ್ನು ಸರಿಪಡಿಸಬೇಕೆಂದು ಸೂಚಿಸಲಾಯಿತು.

11. ಪರಿವರ್ತಕದ ಮೇಲಿರುವ ಭಾರವನ್ನು ಕಡಿಮೆ ಮಾಡಿ ಮತ್ತೊಂದು ಪರಿವರ್ತಕ ಹಾಕುವುದು.

ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು(ವಿ)., ರವರು ಸಂಬಂದಪಟ್ಟ ಶಾಖಾಧಿಕಾರಿ ರವರಿಗೆ ಸ್ಥಳ ಪರೀಶೀಲನೆ ಮಾಡಿ ಅಂದಾಜು ಪಟ್ಟಿಯನ್ನು ತಯಾರಿಸಿ ಸಮಸ್ಯಯನ್ನು ಸರಿಪಡಿಸಬೇಕೆಂದು ಸೂಚಿಸಲಾಯಿತು.

ಸಭೆಯ ಅಂತ್ಯದಲ್ಲಿ ಭಾಗವಹಿಸಿದ ಎಲ್ಲಾ ಗ್ರಾಹಕರಿಗೆ ವಿದ್ಯುತ್ ಬಳಸುವಾಗ ಸುರಕ್ಷತೆಯ ಬಗ್ಗೆ ಗಮನ ಹರಿಸಲು ತಿಳಿಸಲಾಯಿತು, ಹಾಗೂ ಈ ಮೇಲೆ ನಮೂದಿಸಿದ ಎಲ್ಲಾ ಕುಂದು ಕೊರತೆಗಳನ್ನು ಆದಷ್ಟು ಬೇಗನೆ ಪರಿಹರಿಸಲಾಗುವುದು, ಎಂದು ತಿಳಿಸಿ ವಂದನೆಗಳನ್ನು ಸಲ್ಲಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ

~~ಅಧೀಕ್ಷಕ~~ ಅಭಿಯಂತರರು (ವಿ)
ಕಾ ಮತ್ತು ಪಾ ವೃತ್ತ
ಗು.ವಿ.ಸ.ಕಂ.ನಿ,ಕಲಬುರಗಿ

ಗಳು:

ಮುಖ್ಯ ಇಂಜಿನಿಯರ್ (ವಿದ್ಯುಚ್ಛಕ್ತಿ) , ಕಾ ಮತ್ತು ಪಾ ವಲಯ, ಜೆಸ್ಕಾಂ, ಕಲಬುರಗಿ ರವರ ದಯಾಪರ ಮಾಹಿತಿಗಾಗಿ.

Scanned with CamScanner